ನಿಮ್ಮೊಡನೆ

# ಅಮೆರಿಕದ ಉದ್ಯೋಗ: ಕಠಿಣ ಸವಾಲು

ಜಾಗತಿಕ ಉದ್ಯೋಗ ಮಾರುಕಟ್ಟೆಯಲ್ಲಿ ಭಾರತೀಯರಿಗೆ ದೊಡ್ಡ ಹೆಸರಿದೆ. ಅದು ದೈಹಿಕ ಶ್ರಮವನ್ನೇ ಹೆಚ್ಚು ಬಯಸುವ ಕೊಲ್ಲಿ ದೇಶಗಳಿರಬಹುದು ಅಥವಾ ಮಾನಸಿಕ ಶ್ರಮವನ್ನು ಹೆಚ್ಚು ಬಯಸುವ ಅಮೆರಿಕದ ಉದ್ಯೋಗ ಮಾರುಕಟ್ಟೆ ಇರಬಹುದು– ಭಾರತೀಯರು ಎಲ್ಲೆಡೆಯೂ ಸಲ್ಲುವವರು. ಪ್ರತಿಭೆ ಮತ್ತು ಶ್ರಮಜೀವನ ಎರಡನ್ನೂ ಹದವಾಗಿ ಬೆರೆಸಿಕೊಂಡಿರುವ ಭಾರತೀಯರು ಉದ್ಯೋಗ ಮಾರುಕಟ್ಟೆಯ ಕಠಿಣ ಸವಾಲುಗಳನ್ನು ಸಹನೆಯಿಂದ ಎದುರಿಸುವವರು ಎನ್ನುವ ಮೆಚ್ಚುಗೆ ಇದ್ದೇ ಇದೆ. ಈ ಹಿನ್ನೆಲೆಯಲ್ಲಿ ಹಲವು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಲ್ಲೂ ಮುಖ್ಯಸ್ಥರ ಹುದ್ದೆಗಳನ್ನು ಭಾರತೀಯರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ಆದರೆ ಈಗ ಅಮೆರಿಕದಲ್ಲಿ ಅಧಿಕಾರಕ್ಕೆ ಬಂದಿರುವ ಡೊನಾಲ್ಡ್ ಟ್ರಂಪ್ ಅವರ ಹೊಸ ಸರ್ಕಾರ ವಿದೇಶೀ ಕಂಪೆನಿಗಳಿಗೆ ಕೆಲಸ ಕೊಡುವಲ್ಲಿ ಹೇರಲು ಹೊರಟಿರುವ ನಿರ್ಬಂಧಗಳು ಭಾರತದ ಮಾಹಿತಿ ತಂತ್ರಜ್ಞಾನ ಕಂಪೆನಿಗಳಿಗೆ ಗಂಭೀರ ಬೆದರಿಕೆಯನ್ನು ಒಡ್ಡಿವೆ. ಭಾರತದ ಬಹುತೇಕ ಐಟಿ ಕಂಪೆನಿಗಳು ಅಮೆರಿಕದಲ್ಲಿ ದೊಡ್ಡ ಮಟ್ಟದ ವಹಿವಾಟನ್ನು ನಡೆಸುತ್ತಿವೆ. ಐಟಿ ಕ್ಷೇತ್ರದ ಹೊರಗುತ್ತಿಗೆ ವಹಿವಾಟಿನ ವಿರುದ್ಧ ಅಮೆರಿಕದಲ್ಲಿ ರಾಜಕೀಯ ಅಸಹನೆ ಎದ್ದು ಕಾಣಿಸುತ್ತಿರುವುದು ಇದೇನೂ ಹೊಸತಲ್ಲ. ಆದರೆ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾದ ಬಳಿಕ ವಿದೇಶೀ ಕಂಪೆನಿಗಳ ವಹಿವಾಟಿನ ವಿರುದ್ಧ ಸ್ಪಷ್ಟ ಕಾನೂನುಗಳೇ ರಚನೆ ಆಗತೊಡಗಿವೆ. ಅಲ್ಲಿನ ಶಾಸಕಾಂಗ ಮತ್ತು ಕಾರ್ಯಾಂಗಗಳು ಈ ನಿಟ್ಟಿನಲ್ಲಿ ಜಂಟಿ ಕಾರ್ಯಾಚರಣೆಯನ್ನೇ ಆರಂಭಿಸಿವೆ.

ಭಾರತೀಯ ಕಂಪೆನಿಗಳ ಹೊರಗುತ್ತಿಗೆ ವಹಿವಾಟು ಮುಖ್ಯವಾಗಿ ಅಮೆರಿಕ ಸರಕಾರ ನೀಡುತ್ತಿರುವ ಎಚ್1ಬಿ ವೀಸಾಗಳ ಮೇಲೆ ಅವಲಂಬಿತವಾಗಿದೆ. ಈಗ ಅಮೆರಿಕ ಸರಕಾರವು ಎಚ್1ಬಿ ವಲಸೆರಹಿತ ವೀಸಾಗಳ ಮೇಲೆ ಹೇರಿರುವ ಹೊಸ ನಿರ್ಬಂಧಗಳಿಂದಾಗಿ ಅಮೆರಿಕದಲ್ಲಿ ಭಾರತೀಯ ಐಟಿ ಕಂಪೆನಿಗಳು ಕೆಲಸ ನಿರ್ವಹಿಸುವುದು ಹೆಚ್ಚು ಕಷ್ಟವಾಗಲಿದೆ. ಬಹುತೇಕ ಕಂಪೆನಿಗಳು ಹೊರಗುತ್ತಿಗೆ ವಹಿವಾಟನ್ನು ನಿಲ್ಲಿಸುವ ಸಂದರ್ಭವೂ ಬರಬಹುದು. ಈಗಾಗಲೆ ಅಲ್ಲಿನ ಸರಕಾರ ಹೊರಡಿಸಿರುವ ಆದೇಶ ಮತ್ತು ಕಾಂಗ್ರೆಸ್‌ನಲ್ಲಿ ಮಂಡಿಸಲಾಗಿರುವ ಎರಡು ಹೊಸ ಮಸೂದೆಗಳು, ಕುಶಲ ಕೆಲಸಗಾರರ ವೀಸಾದ ಮೇಲೆ ಇನ್ನಷ್ಟು ನಿರ್ಬಂಧಗಳನ್ನು ಹೇರಲು ಅವಕಾಶ ಮಾಡಿಕೊಡುತ್ತವೆ.

ಹೊಸ ಸರಕಾರಿ ಆದೇಶದ ಪ್ರಕಾರ, ಇನ್ನು ಮುಂದೆ ಅಮೆರಿಕದಲ್ಲಿರುವ ವಿದೇಶೀ ಕಂಪೆನಿಗಳು ಎಚ್1ಬಿ ವೀಸಾ ಹೊಂದಿರುವವರಿಗೆ ಕನಿಷ್ಠ 1,30,000 ಅಮೆರಿಕನ್ ಡಾಲರ್ ಸಂಬಳವನ್ನು ಕೊಡಲೇಬೇಕಾಗುತ್ತದೆ. ಇದು ಹಿಂದೆ ಇದ್ದುದಕ್ಕಿಂತ ಬಹುತೇಕ ದುಪ್ಪಟ್ಟು. ಕಂಪೆನಿಗಳಿಗೆ ಇದು ತೀರಾ ದುಬಾರಿಯಾಗಿ ಪರಿಣಮಿಸಲಿದ್ದು ಹೊರಗುತ್ತಿಗೆಯ ವೆಚ್ಚವೂ ತೀವ್ರ ಏರಿಕೆ ಕಾಣಲಿದೆ. ಹಿಂದೆ ಬರಾಕ್ ಒಬಾಮಾ ಸರ್ಕಾರ ಅಮೆರಿಕದಲ್ಲಿರುವ ವಿದೇಶೀ ಪದವೀಧರರಿಗೆ ವಾಸ್ತವ್ಯದ ಅವಧಿಯನ್ನು ವಿಸ್ತರಿಸಿ ಕಾನೂನು ಮಾಡಿತ್ತು. ಟ್ರಂಪ್ ಆಡಳಿತದಲ್ಲಿ ಈ ಆದೇಶವೂ ರದ್ದಾಗುವ ಸಂಭವವಿದೆ. ಭಾರತದಲ್ಲಿ ಪದವಿ ಪಡೆದ ಲಕ್ಷಾಂತರ ವಿದ್ಯಾರ್ಥಿಗಳು ಅಮೆರಿಕಕ್ಕೆ ತೆರಳಿ ಉನ್ನತ ಶಿಕ್ಷಣ ಪಡೆಯುತ್ತಲೇ ದುಡಿಯುತ್ತಿದ್ದಾರೆ. ಕಂಪೆನಿಗಳಲ್ಲಿ ಕೆಲಸ ಮಾಡುವವರು ಸುಲಭವಾಗಿ ಬೇರೆ ಕಂಪೆನಿಗಳಲ್ಲಿ ಕೆಲಸ ಪಡೆಯಲು ಎಲ್1 ವೀಸಾದ ಸೌಲಭ್ಯವಿತ್ತು. ಇದನ್ನೂ ಇನ್ನು ಮುಂದೆ ಕಠಿಣ ಪರಿಶೀಲನೆಗೆ ಒಳಪಡಿಸುವುದಾಗಿ ಟ್ರಂಪ್ ಸರಕಾರ ಹೇಳಿಕೆ ನೀಡಿದೆ. ಈಗ ಇರುವ ವೀಸಾ ನೀಡಿಕೆಯ ಲಾಟರಿ ಪದ್ಧತಿಯನ್ನೂ ಬದಲಾಯಿಸಿ, ಅತ್ಯಧಿಕ ಸಂಬಳದ ಆಧಾರದ ಮೇಲೆ ವೀಸಾ ನೀಡುವ ಪದ್ಧತಿ ತರುವುದಾಗಿಯೂ ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕದಲ್ಲಿ ಈಗ ಇರುವ ಶೇಕಡಾ 70ರಷ್ಟು ಎಚ್1ಬಿ ವೀಸಾಗಳನ್ನು ಭಾರತೀಯ ಕಂಪೆನಿಗಳೇ ಪಡೆದಿವೆ. ಶೇಕಡಾ 65ರಷ್ಟು ಭಾರತೀಯ ಐಟಿ ಕಂಪೆನಿಗಳು ಅಮೆರಿಕದ ಹೊರಗುತ್ತಿಗೆಯನ್ನೇ ನಂಬಿ ಕಾರ್ಯ ನಿರ್ವಹಿಸುತ್ತಿವೆ. ಹೊಸ ಸರಕಾರದ ಹೊಸ ನೀತಿಯಿಂದ ಭಾರತೀಯ ಕಂಪೆನಿಗಳಿಗೆ ಹೆಚ್ಚು ಹೊಡೆತ ಬೀಳುತ್ತದೆ. ಉದ್ಯೋಗಗಳು ಹೆಚ್ಚು ವೆಚ್ಚದಾಯಕ ಆಗುವುದರಿಂದ ಮೈಕ್ರೊಸಾಫ್ಟ್, ಗೂಗಲ್ ಮುಂತಾದ ಅಮೆರಿಕದ ದೈತ್ಯ ಐಟಿ ಕಂಪೆನಿಗಳೂ ತೊಂದರೆಗಳನ್ನು ಅನುಭವಿಸುವುದು ಸುಳ್ಳಲ್ಲ. ಜತೆಗೆ ಅಮೆರಿಕದ ಆರ್ಥಿಕತೆಯ ಮೇಲೂ ಈ ಕ್ರಮಗಳು ದುಷ್ಪರಿಣಾಮ ಬೀರಲಿವೆ. ಆದರೆ ಹೊರಗುತ್ತಿಗೆಯ ಕೆಲಸಗಳಿಗೆ ಅಮೆರಿಕದ ಯುವಜನರು ಹೆಚ್ಚಿನ ಒಲವು ತೋರಿಸಲಿಕ್ಕಿಲ್ಲ. ಸದ್ಯಕ್ಕೆ ಟ್ರಂಪ್ ಸರಕಾರ ಈ ಕುರಿತು ಬಹಿರಂಗವಾಗಿ ಏನೂ ಹೇಳದಿದ್ದರೂ, ಮುಂದೆ ಈ ಸವಾಲನ್ನು ಸರಕಾರವೂ ಎದುರಿಸಬೇಕಾಗುತ್ತದೆ.

ಈ ಪ್ರತಿಕೂಲ ಪರಿಸ್ಥಿತಿಯನ್ನು ಹೇಗೆ ಚಾಣಾಕ್ಷತೆಯಿಂದ ಎದುರಿಸಬೇಕು ಎಂದು ಭಾರತೀಯ ಕಂಪೆನಿಗಳು ಯೋಚಿಸಬೇಕಿದೆ. ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸುವುದು ನಮ್ಮ ಕಂಪೆನಿಗಳಿಗೆ ಹೊಸತೇನಲ್ಲ. ವಹಿವಾಟು ಮಾದರಿಗಳನ್ನು ಬದಲಾಯಿಸಲು ಹಾಗೂ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ವೆಚ್ಚ ಕಡಿಮೆ ಮಾಡಲು ಯತ್ನಿಸಬೇಕು. ಜಾಗತಿಕ ಮಾರುಕಟ್ಟೆಯ ವಿಸ್ತರಣೆಯ ನಿಟ್ಟಿನಲ್ಲೂ ಭಾರತದ ಕಂಪೆನಿಗಳು ಯೋಚಿಸಬೇಕು. ಮಾಹಿತಿ ತಂತ್ರಜ್ಞಾನಕ್ಕಿಂತ ಭಿನ್ನವಾದ ಹೆಚ್ಚು ಮೌಲ್ಯದ ಕ್ಷೇತ್ರಗಳತ್ತ ಗಮನ ಹರಿಸಲೂ ಇದು ಸಕಾಲ.

■ ಬಿ.ಎಂ.ಹನೀಫ್

ಬರಾಕ್ ಒಬಾಮಾ ಸರ್ಕಾರ ಅಮೆರಿಕದಲ್ಲಿರುವ ವಿದೇಶೀ ಪದವೀಧರರಿಗೆ ವಾಸ್ತವ್ಯದ ಅವಧಿಯನ್ನು ವಿಸ್ತರಿಸಿ ಕಾನೂನು ಮಾಡಿತ್ತು. ಟ್ರಂಪ್ ಆಡಳಿತದಲ್ಲಿ ಈ ಆದೇಶವೂ ರದ್ದಾಗುವ ಸಂಭವವಿದೆ.



ಈಶ್ವರ